## 2015 ಕ.ತೀ.ವ. 352

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್

### ಶ್ರೀ ರಮೇಶ್ ಸಿ. ಶೆಟ್ಟಿ ಮತ್ತು ಇನ್ನೊಬ್ಬರು –ವಿರುದ್ಧ– ಸಹಕಾರ ಇಲಾಖೆ, ಕರ್ನಾಟಕ ರಾಜ್ಯ ಮತ್ತು ಇತರರು *

ಭಾರತ ಸಂವಿಧಾನದ ಅನುಚ್ಛೇದ 226 ಮತ್ತು 227ರಡಿಯಲ್ಲಿ ರಿಟ್ ಅರ್ಜಿ.

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 ಮತ್ತು ನಿಯಮಗಳು, 1964.

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ 10ನೇ ಪ್ರಕರಣದ ಮೇರೆಗೆ 4ನೇ ಪ್ರತ್ಯರ್ಜಿದಾರ ಸಂಘವು ಪ್ರಸ್ತಾಪಿಸಿದ ವಿನಿಯಮಗಳು ಹಾಗೂ ಉಪವಿಧಿಗಳಿಗೆ ತಿದ್ದುಪಡಿ ಮಾಡಿರುವುದನ್ನು ಪ್ರಮಾಣೀಕರಿಸಿ ಮತ್ತು ನೋಂದಾಯಿಸಿರುವುದನ್ನು ಅರ್ಜಿದಾರರು ಈ ರಿಟ್ ಅರ್ಜಿಯಲ್ಲಿ ಪ್ರಶ್ನಿಸಿದ್ದಾರೆ.

ಅನುಚ್ಛೇದ 226 ಅಡಿಯಲ್ಲಿನ ಅಧಿಕಾರದ ಚಲಾವಣೆಯನ್ನು ಹಿಂದೆ ಹೇಳಿದ ಅಂಶವನ್ನು ಪರಿಶೀಲಿಸಲು ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಅದಕ್ಕಿಂತ ಹೆಚ್ಚಾಗಿ ಅಲ್ಲ. ಹಾಗಿಲ್ಲದೆ ಹೋದಲ್ಲಿ, ಅಂಗೀಕರಿಸಲಾದ ನಿರ್ಣಯ ಮತ್ತು ಉಪವಿಧಿಗಳ ತಿದ್ದುಪಡಿಯ ನೋಂದಣಿ ಹಾಗೂ ಅಂಥ ತಿದ್ದುಪಡಿಯ ನೋಂದಣಿಯನ್ನು ನಿರ್ದೇಶಿಸಿ ರಿಜಿಸ್ಟ್ರಾರರು ಹೊರಡಿಸಿದ ಆದೇಶ– ಇವು ಸಂಘದ ಉಪವಿಧಿಗಳು ಮತ್ತು ಇತರ ನಿಯಮಗಳು ಹಾಗೂ ವಿನಿಯಮಗಳನ್ನು ಉಲ್ಲಂಘಿಸಿ ಮಾಡಿರುವುದಾಗಿವೆ ಎಂದು ಅಳಲು ತೋಡಿಕೊಳ್ಳಲು ಇಚ್ಛಿಸುವ ಸಂಘದ ಪ್ರತಿಯೊಬ್ಬ ಸದಸ್ಯನಿಗೂ ಈ ನ್ಯಾಯಾಲಯಕ್ಕೆ ಹೋಗುವ ಪರಿಹಾರದ ಅವಕಾಶ ನೀಡುವುದಕ್ಕೆ

* ರಿಟ್ ಅರ್ಜಿ ಸಂ. 37570–71/2011 (ಜಿಎಂ–ಕೆಎಸ್ಆರ್), ದಿನಾಂಕ: 04ನೇ ಸೆಪ್ಟೆಂಬರ್, 2014.

**ಸರಿಸಮವಾಗುತ್ತದೆ. ಮಾಡಿಕೊಳ್ಳಬೇಕಾದ ಮನವರಿಕೆಯು, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 ಮತ್ತು ಕರ್ನಾಟಕ ಸಂಘಗಳ ನೋಂದಣಿ ನಿಯಮಗಳು, 1964ರ ಉಪಬಂಧಗಳಿಗೆ ಅನುಸಾರವಾಗಿ ನಿರ್ಣಯವನ್ನು ಕೈಗೊಳ್ಳಲಾಗಿದೆಯೇ? ಎಂಬುದನ್ನು ಪರಿಶೀಲಿಸುವ ಅಗತ್ಯತೆಗೆ ಸಂಬಂಧಿಸಿದ್ದಾಗಿರಬೇಕೆಂದು ಸ್ಪಷ್ಟಪಡಿಸುವ, ಅದರಲ್ಲಿ ಬಳಸಲಾದ ಪದಗಳನ್ನು ಉಲ್ಲೇಖಿಸದೆ, ಪ್ರಕರಣ 10ರ ಉಪಪ್ರಕರಣ (2)ನ್ನು ಅರ್ಥೈಸುವ ಮೂಲಕ ಇಂತಹ ಸನ್ನಿವೇಶವನ್ನು ಉಂಟು ಮಾಡಲಾಗದು.**

**ಆದ್ದರಿಂದ, ಅರ್ಜಿದಾರರು ಕಾನೂನಿನ ಅನುಸಾರ, ಸೂಕ್ತ ನ್ಯಾಯಾಧಿಕರಣದ ಮುಂದೆ ತಮ್ಮ ಅಳಲನ್ನು ಹೇಳಿಕೊಳ್ಳಲು ಅವರಿಗೆ ಸ್ವಾತಂತ್ರ್ಯವನ್ನು ಮೀಸಲಿರಿಸಿ, ರಿಟ್ ಅರ್ಜಿಗಳನ್ನು ವಜಾ ಮಾಡಲಾಗಿದೆ. (ಪ್ಯಾರಾ: 14, 17)**

ಅರ್ಜಿದಾರರ ಪರ : ಶ್ರೀ ಜಯಕುಮಾರ್ ಎಸ್. ಪಾಟೀಲ್ – ಹಿರಿಯ ವಕೀಲರು
ಶ್ರೀ ವಿಶ್ವಜಿತ್ ಶೆಟ್ಟಿ – ವಕೀಲರು ;
1–2ನೇ ಪ್ರತ್ಯರ್ಜಿದಾರರ ಪರ : ಶ್ರೀ ಡಿ. ಅಶ್ವತ್ಥಪ್ಪ – ಎ.ಜಿ.ಎ ;
4ನೇ ಪ್ರತ್ಯರ್ಜಿದಾರರ ಪರ : ಶ್ರೀ ವಿಶ್ವಜಿತ್ ರಾಯ್ – ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ.ಎಸ್.ಪಾಟೀಲ್ :**

1. ಅರ್ಜಿದಾರರು 4ನೇ ಪ್ರತ್ಯರ್ಜಿದಾರ ಸಂಘದ ಸದಸ್ಯರಾಗಿದ್ದಾರೆ. ಅವರು, ಸಂಘದ ಉಪವಿಧಿಗಳಿಗೆ 4ನೇ ಪ್ರತ್ಯರ್ಜಿದಾರ ಸಂಘವು ಪ್ರಸ್ತಾವಿಸಿದ ನಿಯಮಗಳು ಮತ್ತು ವಿನಿಯಮಗಳಿಗೆ ತಿದ್ದುಪಡಿ ಮಾಡುವುದನ್ನು ಪ್ರಮಾಣೀಕರಿಸಿ ಹಾಗೂ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 10ರ ಅಡಿಯಲ್ಲಿ ಸಂಘವನ್ನು ನೋಂದಾಯಿಸಿ, ಮಂಗಳೂರಿನ

ದಕ್ಷಿಣ ಕನ್ನಡ ಜಿಲ್ಲೆಯ ಸಹಕಾರ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರ್‌ರವರು ನೀಡಿದ ದಿನಾಂಕ 16.09.2011ರ ಹಿಂಬರಹ ಅನುಬಂಧ–ಎ ಯನ್ನು ಪ್ರಶ್ನಿಸಿ, ಈ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದಾರೆ.

2. 4ನೇ ಪ್ರತ್ಯರ್ಜಿದಾರ ಸಂಘವು ಸಂಘದ ಉಪವಿಧಿಗಳ ತಿದ್ದುಪಡಿಗಾಗಿ ಪ್ರಸ್ತಾವವನ್ನು ಪರಿಗಣಿಸಲು, ಕುಂದಾಪುರದಲ್ಲಿ ದಿನಾಂಕ 07.08.2011ರಂದು ಸರ್ವಸದಸ್ಯರ ವಿಶೇಷ ಸಭೆಯನ್ನು ನಡೆಸಿತು. ಸದರಿ ಸಭೆಯಲ್ಲಿ, ಉಪವಿಧಿಗಳನ್ನು ತಿದ್ದುಪಡಿ ಮಾಡಲು ದಿನಾಂಕ 07.08.2011ರ ಅನುಬಂಧ–ಪಿ ಅನುಸಾರ ನಿರ್ಣಯವನ್ನು ಅಂಗೀಕರಿಸಲಾಯಿತು. ಅರ್ಜಿದಾರನು ರಿಟ್ ಅರ್ಜಿಯಲ್ಲಿ ದಿನಾಂಕ 07.08.2011ರ ಸದರಿ ನಿರ್ಣಯ ಅನುಬಂಧ–ಪಿ ಯನ್ನು ಸಹ ಪ್ರಶ್ನಿಸಿದ್ದಾನೆ. ಅಧಿನಿಯಮದ ಪ್ರಕರಣ 27(ಎ) ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಿ 4ನೇ ಪ್ರತ್ಯರ್ಜಿದಾರ ಸಂಘಕ್ಕೆ ಆಡಳಿತಗಾರನನ್ನು ನೇಮಿಸಲು 1ನೇ ಪ್ರತ್ಯರ್ಜಿದಾರನ ವಿರುದ್ಧ ಪರಮಾದೇಶ ಲೇಖವನ್ನು ಸಹ ಕೋರಲಾಗಿದೆ.

3. ಮೊದಲಿಗೆ, ಮಾನ್ಯ ಹಿರಿಯ ವಕೀಲ ಶ್ರೀ ಜಯಕುಮಾರ್ ಎಸ್. ಪಾಟೀಲ್‌ರವರು, ಈ ರಿಟ್ ಅರ್ಜಿಯನ್ನು ಸಲ್ಲಿಸಿದ ನಂತರ, ಸ್ವಲ್ಪ ಕಾಲದಲ್ಲೇ ಚುನಾವಣೆ ನಡೆದಿದೆ ಮತ್ತು ಹೊಸ ಮಂಡಳಿಯು ಯುಕ್ತವಾಗಿ ಆಯ್ಕೆಗೊಂಡಿದ್ದು, ಸಂಘದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿರುವ ಕಾರಣದಿಂದ ಆಡಳಿತಗಾರನ ನೇಮಕಾತಿಯನ್ನು ಕೋರುವ ಪರಮಾದೇಶದ ಸಹಾಯವನ್ನು ಬಳಸಿಕೊಂಡಿಲ್ಲವೆಂದು ಅಭಿಪ್ರಾಯಪಡುತ್ತಾರೆ.

4. ಮೇಲೆ ತಿಳಿಸಿರುವ ಸಹಾಯಗಳನ್ನು ಕೋರಿರುವುದರ ಆಧಾರದ ಮೇಲೆ ಮುಖ್ಯವಾದವು, ಸರ್ವಸದಸ್ಯರ ವಿಶೇಷ ಸಭೆಯನ್ನು ಕುಂದಾಪುರದಲ್ಲಿ ನಡೆಸಿರುವುದು, ಸಂಘವು ಇರುವ ಕೇಂದ್ರ ಕಾರ್ಯಸ್ಥಾನದ ತಾಲ್ಲೂಕಿನ ಪರಿಮಿತಿಗಳೊಳಗೆ ಸರ್ವಸದಸ್ಯರ ವಿಶೇಷ ಸಭೆಯನ್ನು ನಡೆಸತಕ್ಕದ್ದೆಂದು ಅಗತ್ಯಪಡಿಸುವ ಸಂಘದ ಉಪವಿಧಿಗಳ ಉಪವಿಧಿ ಸಂಖ್ಯೆ 7(ಡಿ)ಗೆ ವಿರುದ್ಧವಾದುದು ಎಂಬುದಾಗಿದೆ.

ಸಂಘದ ಕೇಂದ್ರ ಕಾರ್ಯಸ್ಥಾನವು ಮಂಗಳೂರಿನಲ್ಲಿದೆ ಮತ್ತು ಆದ್ದರಿಂದ ಕುಂದಾಪುರದಲ್ಲಿ ಸಭೆ ನಡೆಸಿರುವುದು ಸದರಿ ಉಪವಿಧಿಗಳಿಗೆ ವಿರುದ್ಧವಾಗಿದೆ ಎಂದು ವಾದಿಸಲಾಗಿದೆ.

5. ಮಂಡಿಸಲಾದ ಎರಡನೇ ವಾದವೆಂದರೆ, ದಿನಾಂಕ 07.08.2011ರಂದು ನಿಗದಿಗೊಳಿಸಿದ್ದ ಸರ್ವಸದಸ್ಯರ ವಿಶೇಷ ಸಭೆಯಲ್ಲಿ ಚರ್ಚಿಸಬೇಕಾದ ಪ್ರಸ್ತಾವಿತ ತಿದ್ದುಪಡಿಗೆ ಸಂಬಂಧಿಸಿದಂತೆ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಸಂಘಕ್ಕೆ ಮತ್ತು ಅದರ ಪದಾಧಿಕಾರಿಗಳಿಗೆ ನಿರ್ದೇಶಿಸಿ ಮಧ್ಯಕಾಲೀನ ಆದೇಶವನ್ನು ನೀಡಲಾಗಿತ್ತು. ಸದರಿ ಮಧ್ಯಕಾಲೀನ ಆದೇಶವಿದ್ದರೂ, ಅದನ್ನು ಉಲ್ಲಂಘಿಸಿ, ಸಂಘವು ಸಭೆ ನಡೆಸಿ ಮುಂದುವರೆದಿದ್ದು ಮತ್ತು ಪ್ರಶ್ನಿತ ನಿರ್ಣಯ ಅನುಬಂಧ–ಪಿ ಯನ್ನು ಅಂಗೀಕರಿಸಿದ್ದು, ಅದು ಕಾನೂನುಬಾಹಿರವಾಗಿದೆ.

6. ಮಂಡಿಸಲಾದ ಕೊನೆಯ ವಾದವೆಂದರೆ, ಕುಂದಾಪುರದಲ್ಲಿ ಸಭೆಯನ್ನು ಸಮಾವೇಶಗೊಳಿಸಲು 14.06.2011ರಂದು ನಡೆಸಿದ ಸಭೆಯಲ್ಲಿ, ಕಾರ್ಯಕಾರಿ ಸಮಿತಿಯಲ್ಲಿ ಯಾವುದೇ ನಿರ್ಣಯವನ್ನು ಅಂಗೀಕರಿಸಿರುವುದಿಲ್ಲ ಮತ್ತು ವಾಸ್ತವವಾಗಿ, ಕಾರ್ಯಕಾರಿ ಸಮಿತಿಯ 58 ಸದಸ್ಯರಲ್ಲಿ 33 ಸದಸ್ಯರು, ಉಪವಿಧಿಯನ್ನು ತಿದ್ದುಪಡಿ ಮಾಡಲು ಮತ್ತು ಕುಂದಾಪುರದಲ್ಲಿ ಸಭೆ ನಡೆಸಲು ಪ್ರಸ್ತಾಪಿಸಿ, ಯಾವುದೇ ನಿರ್ಣಯವನ್ನು ಅಂಗೀಕರಿಸಿರುವುದಿಲ್ಲ ಎಂಬ ಹೇಳಿಕೆ ನೀಡಿ, 13.01.2012ರಂದು ಈ ನ್ಯಾಯಾಲಯದ ಮುಂದೆ ಅಫಿಡವಿಟ್ಟುಗಳನ್ನು ಸಲ್ಲಿಸಿದ್ದಾರೆ.

7. ದಾವೆ ಹೂಡಿದ ಪ್ರತ್ಯರ್ಜಿದಾರನ ಪರ ಹಾಜರಾದ ಮಾನ್ಯ ಹಿರಿಯ ವಕೀಲ ಶ್ರೀ ಅಶೋಕ್ ಹಾರ್ನಳ್ಳಿಯವರು ಎತ್ತಿದ ರಿಟ್ ಅರ್ಜಿಯು ಸಮರ್ಥನೀಯವಾಗಿದೆಯೇ? ಎಂಬ ಪ್ರಶ್ನೆಯು ವಾಸ್ತವವಾಗಿ ಪ್ರಾರಂಭಿಕ ಆಕ್ಷೇಪಣೆಯಾಗಿದ್ದು, ಆ ಪ್ರಶ್ನೆಗೆ ಸಂಬಂಧಿಸಿದಂತೆ, ಮಾನ್ಯ ಹಿರಿಯ ವಕೀಲ ಶ್ರೀ ಜಯಕುಮಾರ್ ಎಸ್.ಪಾಟೀಲ್‌ರವರು ಅಧಿನಿಯಮದ ಪ್ರಕರಣ 6, 8 ಮತ್ತು 10ರ ಕಡೆಗೆ ನ್ಯಾಯಾಲಯದ ಗಮನ ಸೆಳೆಯುತ್ತಾರೆ ಮತ್ತು ಉಪವಿಧಿಗಳಿಗೆ

ಮಾಡಬೇಕೆಂದು ಕೋರಲಾದ ತಿದ್ದುಪಡಿಯು, ಅಧಿನಿಯಮದ ಮತ್ತು ಕರ್ನಾಟಕ ಸಂಘಗಳ ನೋಂದಣಿ ನಿಯಮಗಳು, 1964 (ಸಂಕ್ಷಿಪ್ತವಾಗಿ 'ನಿಯಮಗಳು')ರ ಉಪಬಂಧಗಳಿಗೆ ಅನುಸಾರವಾಗಿದೆ ಎಂದು ರಿಜಿಸ್ಟ್ರಾರರು ತಾವು ಮನವರಿಕೆ ಮಾಡಿಕೊಳ್ಳುವ ಅಗತ್ಯವಿದೆ ಮತ್ತು ಆ ನಂತರ ಮಾತ್ರವೇ, ಅವರು ಸಂಘದಿಂದ ಅಂಗೀಕೃತವಾದ ನಿರ್ಣಯದ ದಿನಾಂಕದಿಂದ ಜಾರಿಗೆ ಬರುವಂತೆ ತಿದ್ದುಪಡಿಯನ್ನು ನೋಂದಣಿ ಮಾಡಬಹುದೆಂದು ವಾದಿಸಿದ್ದಾರೆ. ಈ ಮನವರಿಕೆಯನ್ನು, ಸಂಬಂಧಪಟ್ಟ ಅಂಶಗಳನ್ನು ಕುರಿತು ಆಲೋಚಿಸಿದ ನಂತರ ಮತ್ತು ಉಪವಿಧಿಯ ಅನುಸಾರ ನಡೆಸಬೇಕೆಂದು ಅಗತ್ಯಪಡಿಸಿದ ಸ್ಥಳಗಳಲ್ಲಿ, ಕಾನೂನಿಗೆ ಅನುಸಾರವಾಗಿ ಹಾಗೂ ಉಪವಿಧಿಗಳಿಂದ ಕಡ್ಡಾಯಗೊಳಿಸಲಾದ ಅವಧಿಗಳಲ್ಲಿ ಸಭೆಯನ್ನು ನಡೆಸುವ ಬಗ್ಗೆ ಸ್ವತಃ ತನಗೆ ಮನವರಿಕೆಯಾದ ನಂತರ ದಾಖಲಿಸಲಾಗಿದೆ ಎಂದು ತೋರಿಸಬೇಕೆಂದು ವಾದವನ್ನು ಮಂಡಿಸಲಾಗಿದೆ. ಈ ಸಂಬಂಧ, ಪ್ರತಿಯೊಂದು ಸಂಘದ ಜ್ಞಾಪನ ಪತ್ರವನ್ನು ಅಧಿನಿಯಮದ ಪ್ರಕರಣ 6(2)ರ ಅನುಸಾರ ನೋಂದಾಯಿಸಬೇಕೆಂದು ಅಗತ್ಯಪಡಿಸಲಾಗಿದೆ ಮತ್ತು ಅದು ಸದಸ್ಯರ ಪ್ರವೇಶ, ಸಾಮಾನ್ಯ ಸಭೆಗಳು, ಅಂಥ ಸಭೆಗಳಲ್ಲಿ ಅದರ ವ್ಯವಹರಣೆಗಳಿಗೆ ಸಂಬಂಧಿಸುವ ಉಪಬಂಧಗಳನ್ನು ಒಳಗೊಳ್ಳಬೇಕೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ, ಸಂಘದ ಜ್ಞಾಪನಪತ್ರ ಮತ್ತು ಉಪವಿಧಿಗಳ ರೂಪದಲ್ಲಿ ನಿಯಮಗಳು ಹಾಗೂ ವಿನಿಯಮಗಳನ್ನು, ಅಧಿನಿಯಮದ ಪ್ರಕರಣ 6(2)ಕ್ಕೆ ಅನುಸಾರವಾಗಿ ನೋಂದಾಯಿಸಲಾಗಿದ್ದ ಹೊರತು, ಸಂಘವು ಕಾರ್ಯನಿರ್ವಹಿಸುವಂತಿಲ್ಲ. ಹೀಗಾಗಿ, ಸಂಘದ ಅಂಥ ನಿಯಮಗಳು ಮತ್ತು ವಿನಿಯಮಗಳು/ಉಪವಿಧಿಗಳಿಗೆ ಅನುಸಾರವಾಗಿ ಉಪವಿಧಿಗಳನ್ನು ತಿದ್ದುಪಡಿ ಮಾಡುವ ನಿರ್ಣಯವನ್ನು ಅಂಗೀಕರಿಸಲಾಗಿದೆಯೇ? ಎಂಬುದನ್ನು ಸ್ವತಃ ಮನದಟ್ಟು ಮಾಡಿಕೊಳ್ಳುವುದು ರಿಜಿಸ್ಟ್ರಾರರ ಕರ್ತವ್ಯವಾಗಿರುತ್ತದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಅಧಿನಿಯಮ ಮತ್ತು ನಿಯಮಗಳ ಎಲ್ಲಾ ಅಗತ್ಯತೆಗಳನ್ನು ಪಾಲಿಸಲಾಗಿದೆಯೆಂದು ರಿಜಿಸ್ಟ್ರಾರರು ಯುಕ್ತವಾಗಿ ಮನದಟ್ಟು ಮಾಡಿಕೊಂಡ ನಂತರ ಮಾತ್ರವೇ ಸಂಘಗಳ ನೋಂದಣಿಯನ್ನು ಮಾಡಲಾಗುವುದು ಮತ್ತು ಆ ನಂತರ, ಸಂಘದ ಜ್ಞಾಪನಪತ್ರ ಮತ್ತು ನಿಯಮಗಳು ಹಾಗೇ ವಿನಿಯಮಗಳನ್ನು ಉಳಿಸಿಕೊಂಡು, ಸಂಘವು ಯುಕ್ತವಾಗಿ ನೋಂದಣಿಯಾಗಿದೆ ಎಂದು ಬರೆದು, ತಮ್ಮ ಸಹಿ ಹಾಕಿ

ದೃಢೀಕರಿಸಿರುತ್ತಾರೆಂದು ಅವರು ಅಧಿನಿಯಮದ ಪ್ರಕರಣ 8ನ್ನು ಉಲ್ಲೇಖಿಸಿ ಸೂಚಿಸಿದ್ದಾರೆ.

8. ಇದಕ್ಕೆ ವಿರುದ್ಧವಾಗಿ, ಮಾನ್ಯ ಹಿರಿಯ ವಕೀಲ ಶ್ರೀ ಅಶೋಕ್ ಹಾರ್ನಳ್ಳಿ ಅವರು, ಉಪವಿಧಿಗಳನ್ನು ತಿದ್ದುಪಡಿ ಮಾಡಿ, ಸಂಘವು ಅಂಗೀಕರಿಸಿದ ನಿರ್ಣಯವನ್ನು ಪ್ರಶ್ನಿಸಿ, ಉಪವಿಧಿಗಳ ತಿದ್ದುಪಡಿಯ ವಿರುದ್ಧ 4ನೇ ಪ್ರತ್ಯರ್ಜಿದಾರ–ಸಂಘದ ಇಬ್ಬರು ಸದಸ್ಯರು ಮಾತ್ರ ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ; ಪ್ರಕರಣ 10(2)ರ ಅಡಿಯಲ್ಲಿ ರಿಜಿಸ್ಟ್ರಾರರಿಗೆ ಮನದಟ್ಟಾಗುವಿಕೆಯು ಅಧಿನಿಯಮದ ಉಪಬಂಧಗಳು ಮತ್ತು ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳಿಗೆ ಸೀಮಿತವಾಗಿದೆಯೇ ಹೊರತು ಉಪವಿಧಿಗಳಲ್ಲಿ ನಮೂದಿಸಲಾದ ಇತರ ಅಂಶಗಳಿಗಾಗಿ ಅಲ್ಲ ಎಂಬ ಕಾರಣದಿಂದ, ನಿರ್ದಿಷ್ಟವಾಗಿ, ಅಂಥ ಅರ್ಜಿಯನ್ನು ಸಮರ್ಥಿಸಲಾಗುವುದಿಲ್ಲ.

9. ದಾವೆ ಹೂಡಿದ ಅರ್ಜಿದಾರನು ಮಂಡಿಸಿದ ವಾದಗಳನ್ನು ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಸಮರ್ಥಿಸುತ್ತಾರೆ.

10. ಎರಡೂ ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರ ವಾದಗಳನ್ನು ಆಲಿಸಿದ್ದು ಮತ್ತು ದಾಖಲೆಯಲ್ಲಿರುವ ವಿಷಯಗಳನ್ನು ಅವಗಾಹನೆ ಮಾಡಿದ್ದು, ಸಂಘದ ಉಪವಿಧಿಗಳ ತಿದ್ದುಪಡಿಯನ್ನು ಅನುಮೋದಿಸುವಲ್ಲಿ ರಿಜಿಸ್ಟ್ರಾರರ ಮನದಟ್ಟು ಮಾಡಿಕೊಳ್ಳುವಿಕೆಗೆ ಸಂಬಂಧಿಸಿದಂತೆ, ಅಧಿನಿಯಮದ ಪ್ರಕರಣ 19(2)ರ ಅಡಿಯಲ್ಲಿ ಅಧಿನಿಯಮಿಸಿರುವ ಉಪಬಂಧಗಳ ವ್ಯಾಪ್ತಿಯನ್ನು ಪರಿಶೀಲಿಸುವುದು ಅಗತ್ಯವಾಗಿದೆ. ಅಧಿನಿಯಮದ ಪ್ರಕರಣ 10ರ ಉಪಪ್ರಕರಣ (2), ಉಪಪ್ರಕರಣ (1)ರ ಅಡಿಯಲ್ಲಿ ಮಾಡಲಾದ ತಿದ್ದುಪಡಿಯು ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿದೆಯೆಂದು ರಿಜಿಸ್ಟ್ರಾರರಿಗೆ ಮನದಟ್ಟಾಗಿದ್ದಲ್ಲಿ, ಅವರು ಅದನ್ನು ನೋಂದಾಯಿಸತಕ್ಕದ್ದು ಮತ್ತು ಆ ನಂತರ, ಅಂಥ ತಿದ್ದುಪಡಿಯು ಪ್ರಕರಣ 10ರ ಉಪಪ್ರಕರಣ (1)ರ ಅನುಸಾರ ಸಂಘವು ಅಂಗೀಕರಿಸಿದ ನಿರ್ಣಯದ ದಿನಾಂಕದಿಂದ ಜಾರಿಗೆ ಬರುತ್ತದೆ.

11. ರಿಜಿಸ್ಟ್ರಾರರಿಗೆ ಆಗಬೇಕಾದ ಮನವರಿಕೆಯು, ಅಧಿನಿಯಮದ ಉಪಬಂಧಗಳ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಅನುಸಾರ ಮಾಡಲಾಗಿರುವ ತಿದ್ದುಪಡಿಗೆ ಸಂಬಂಧಿಸಿದ್ದಾಗಿದೆ. ಉಪಬಂಧಗಳು ಸ್ಪಷ್ಟ ಮತ್ತು ಅಸಂದಿಗ್ಧವಾಗಿದ್ದಲ್ಲಿ, ಉಪಬಂಧಗಳಿಗೆ ನೀಡಬೇಕಾದ ಅರ್ಥವು, ಬಳಸಲಾದ ಪದಗಳಿಗೆ ಹಾಗೂ ಅದರಲ್ಲಿ ವ್ಯಕ್ತಪಡಿಸಿದ ಉದ್ದೇಶಕ್ಕೆ ಸಂಬಂಧಪಟ್ಟಿದ್ದಾಗಿರಬೇಕು ಎಂಬುದು ಶಾಸನದ ರಚನೆಯ ಸುಸ್ಥಾಪಿತವಾದ ತತ್ವವಾಗಿದೆ. ಈ ತತ್ವವನ್ನು ಗಮನದಲ್ಲಿಟ್ಟುಕೊಂಡು, ಪ್ರಕರಣ 10ರ ಉಪಪ್ರಕರಣ (2)ರಲ್ಲಿ ಹೇಳಲಾದಂತೆ, ಅಗತ್ಯತೆಯನ್ನು ಪರಿಶೀಲಿಸಲಾಗಿದ್ದಲ್ಲಿ, ಆಗ ರಿಜಿಸ್ಟ್ರಾರರ ಮನವರಿಕೆಯು, ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗೆ ಅನುಸಾರವಾಗಿರುವ ತಿದ್ದುಪಡಿಗೆ ಸಂಬಂಧಿಸಿದಂತೆ ಇರುತ್ತದೆಯೆಂದು ಸ್ಪಷ್ಟವಾಗುತ್ತದೆ. ಹೀಗಾಗಿ, ರಿಜಿಸ್ಟ್ರಾರರ ಮನವರಿಕೆಯು ಅಧಿನಿಯಮದ ಉಪಬಂಧಗಳಿಗೆ ಹಾಗೂ ನಿಯಮಗಳಿಗೆ ಅನುಸಾರವಾಗಿರುವ ತಿದ್ದುಪಡಿಗೆ ಸೀಮಿತವಾಗಿದೆ.

12. ಪ್ರಕರಣ 10ರ ಉಪಪ್ರಕರಣ (1)ರಲ್ಲಿ ಹೇಳಲಾಗಿರುವಂತೆ, ಅಗತ್ಯತೆಯು, ಸರ್ವಸದಸ್ಯರ ವಿಶೇಷ ಸಭೆಯ ದಿನಾಂಕಕ್ಕೆ 21 ದಿನಗಳು ಮುಂಚಿತವಾಗಿ ಸಂಘದ ಪ್ರತಿಯೊಬ್ಬ ಸದಸ್ಯನಿಗೂ ಲಿಖಿತ ಮತ್ತು ಮುದ್ರಿತ ನೋಟೀಸನ್ನು ತಲುಪಿಸಬೇಕಿದ್ದು ಅಥವಾ ಅಂಚೆ ಮೂಲಕ ಕಳುಹಿಸಬೇಕಿದ್ದು, ಆ ಉದ್ದೇಶಕ್ಕಾಗಿ ಸಮಾವೇಶಗೊಳಿಸಿದ ಸದರಿ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದಿಂದ ಸಂಘದ ನಿಯಮಗಳು ಮತ್ತು ವಿನಿಯಮಗಳನ್ನು ತಿದ್ದುಪಡಿ ಮಾಡಬಹುದು ಎಂಬುದಾಗಿದೆ ಮತ್ತು ತಿದ್ದುಪಡಿಯನ್ನು ಪ್ರಸ್ತಾವಿಸುವ ನಿರ್ಣಯವನ್ನು ಖುದ್ದಾಗಿ ಅಥವಾ ಪ್ರತಿನಿಧಿ ಮೂಲಕ ತಮ್ಮ ಮತ ಚಲಾಯಿಸಲು ಹಕ್ಕುಳ್ಳ ಸದಸ್ಯರು ನಿರ್ಣಯದ ಪರವಾಗಿ ಚಲಾಯಿಸಿದ ಮತಗಳಿಂದ, ಅಂಗೀಕರಿಸಲಾಗಿದೆ ಮತ್ತು ಹಾಗೆ ಹಕ್ಕುಳ್ಳ ಸದಸ್ಯರು ನಿರ್ಣಯದ ವಿರುದ್ಧ ಮತ ಚಲಾಯಿಸಿರುವುದು, ಯಾವುದಾದರೂ ಇದ್ದಲ್ಲಿ ಅಂಥ ಮತಗಳು, ಮತಗಳ ಸಂಖ್ಯೆಯ ಮೂರುಪಟ್ಟಿಗಿಂತ ಕಡಿಮೆಯಾಗಿರತಕ್ಕದ್ದಲ್ಲ.

13. ಪ್ರಕರಣ 10ರ ಉಪಪ್ರಕರಣ (1)ರ ಅಡಿಯಲ್ಲಿ ಒಳಗೊಂಡಿರುವ ಉಪಬಂಧಗಳ ಉಲ್ಲಂಘನೆಯಾಗಿದೆಯೆಂಬುದು ಅರ್ಜಿದಾರನ ವಾದವಲ್ಲ. ಮತ್ತೊಂದು ಕಡೆಯಲ್ಲಿ ಉಪವಿಧಿಯ ಅನುಸಾರ, ನಡೆಸಬೇಕಾಗಿದ್ದ ಸ್ಥಳದಲ್ಲಿ ಸಭೆಯನ್ನು ನಡೆಸಿಲ್ಲವೆಂದು ವಾದ ಮಂಡಿಸಲಾಗಿದೆ. ನೀಡಲಾಗಿದ್ದ ಯಥಾಸ್ಥಿತಿ ಕಾಯ್ದುಕೊಳ್ಳುವ ಆದೇಶವನ್ನು ನಿರ್ಲಕ್ಷಿಸಿ ಸಭೆ ನಡೆಸಲಾಯಿತೆಂದು ಸಹ ವಾದಿಸಲಾಗಿದೆ. ಆದ್ದರಿಂದ ತಿದ್ದುಪಡಿಯ ನೋಂದಣಿಗೆ ಆದೇಶಿಸುವುದಕ್ಕೆ ಮುಂಚೆ ರಿಜಿಸ್ಟ್ರಾರರು ತೃಪ್ತಿಕರವಾಗಿದೆಯೆಂದು ದಾಖಲಿಸುವಿಕೆಯು, ಅಧಿನಿಯಮ ಮತ್ತು ನಿಯಮಗಳಿಗೆ ಅನುಸಾರವಾಗಿ ಸಂಘವು ಹೊರಡಿಸಿದ ತಿದ್ದುಪಡಿಗೆ ಸಂಬಂಧಿಸಿದಂತೆ ಇದ್ದಾಗ, ಅಧಿನಿಯುಮ ಮತ್ತು ನಿಯುಮಗಳ ಸದರಿ ಉಪಬಂಧಗಳ ಉಲ್ಲಂಘನೆಯಾಗದಿರುವವರೆಗೂ, ಈಗಿರುವ ಉಪವಿಧಿಗಳನ್ನು ತಿದ್ದುಪಡಿ ಮಾಡಲು ನಿರ್ಣಯಿಸುವ ನಿರ್ಣಯವನ್ನು ಅಂಗೀಕರಿಸುವಾಗ, ಕೆಲವು ಉಪವಿಧಿಗಳು ಹೊಂದಿಕೊಳ್ಳುವುದಿಲ್ಲವೆಂದು ಬರಿಯ ಸಂಗತಿಯು, ಭಾರತ ಸಂವಿಧಾನದ ಅನುಚ್ಛೇದ 226ನ್ನು ಅನ್ವಯಿಸಲು ಕೋರಿ ಮತ್ತು ಅದರ ಮಧ್ಯಪ್ರವೇಶವನ್ನು ಅಪೇಕ್ಷಿಸಿ ರಿಟ್ ನ್ಯಾಯಾಲಯಕ್ಕೆ ಹೋಗಲು ಕಾರಣವಾಗಲಾರದು. ಇದು ಸದಸ್ಯರಿಗೆ ಅಥವಾ ಸಂಘಕ್ಕೆ ಆ ಸಂಬಂಧವಾಗಿ ಸೂಕ್ತ ವೇದಿಕೆಯಲ್ಲಿ ಅದನ್ನು ಚರ್ಚೆ ಮಾಡಲು ಕಾರಣವಾಗಬಹುದು. ನ್ಯಾಯಿಕ ಪರಿಶೀಲನೆಯನ್ನು ನಡೆಸುವ ಉದ್ದೇಶಕ್ಕಾಗಿ, ಭಾರತ ಸಂವಿಧಾನದ ಅನುಚ್ಛೇದ 226ರ ಅಡಿಯಲ್ಲಿನ ಅಧಿಕಾರವು, ತಿದ್ದುಪಡಿಯನ್ನು ಅಧಿನಿಯಮ ಮತ್ತು ನಿಯಮಗಳಿಗೆ ಅನುಸಾರವಾಗಿ ಮಾಡಲಾಗಿದೆಯೆಂದು ರಿಜಿಸ್ಟ್ರಾರರಿಗೆ ಮನವರಿಕೆಯಾಗುವುದಕ್ಕೆ ಮುಂಚೆ ಪ್ರಕರಣ 10ರ ಉಪಪ್ರಕರಣ (2)ರಲ್ಲಿ ಹೇಳಲಾದಂತೆ ರಿಜಿಸ್ಟ್ರಾರರು ಸಂಬಂಧಪಟ್ಟ ಅಂಶಗಳ ಟಿಪ್ಪಣಿಯನ್ನು ಮಾಡಿಕೊಂಡಿದ್ದಾರೆಯೇ? ಎಂಬುದನ್ನು ನಿರ್ಣಯಿಸುವುದಕ್ಕೆ ಸೀಮಿತವಾಗಿದೆ.

14. ಅನುಚ್ಛೇದ 226ರ ಅಡಿಯಲ್ಲಿನ ಅಧಿಕಾರದ ಚಲಾವಣೆಯನ್ನು ಹಿಂದೆ ಹೇಳಿದ ಅಂಶವನ್ನು ಪರಿಶೀಲಿಸಲು ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಅದಕ್ಕಿಂತ ಹೆಚ್ಚಾಗಿ ಅಲ್ಲ. ಹಾಗಿಲ್ಲದೆ ಹೋದಲ್ಲಿ, ಅಂಗೀಕರಿಸಲಾದ ನಿರ್ಣಯ ಮತ್ತು ಉಪವಿಧಿಗಳ ತಿದ್ದುಪಡಿಯ ನೋಂದಣಿ ಹಾಗೂ ಅಂಥ ತಿದ್ದುಪಡಿಯ

ನೋಂದಣಿಯನ್ನು ನಿರ್ದೇಶಿಸಿ ರಿಜಿಸ್ಟ್ರಾರರು ಹೊರಡಿಸಿದ ಆದೇಶ– ಇವು ಸಂಘದ ಉಪವಿಧಿಗಳು ಮತ್ತು ಇತರ ನಿಯಮಗಳು ಹಾಗೂ ವಿನಿಯಮಗಳನ್ನು ಉಲ್ಲಂಘಿಸಿ ಮಾಡಿರುವುದಾಗಿವೆ ಎಂದು ಅಳಲು ತೋಡಿಕೊಳ್ಳಲು ಇಚ್ಛಿಸುವ ಸಂಘದ ಪ್ರತಿಯೊಬ್ಬ ಸದಸ್ಯನಿಗೂ ಈ ನ್ಯಾಯಾಲಯಕ್ಕೆ ಹೋಗುವ ಪರಿಹಾರದ ಅವಕಾಶ ನೀಡುವುದಕ್ಕೆ ಸರಿಸಮವಾಗುತ್ತದೆ. ಮಾಡಿಕೊಳ್ಳಬೇಕಾದ ಮನವರಿಕೆಯು, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 ಮತ್ತು ಕರ್ನಾಟಕ ಸಂಘಗಳ ನೋಂದಣಿ ನಿಯುಮಗಳು, 1964ರ ಉಪಬಂಧಗಳಿಗೆ ಅನುಸಾರವಾಗಿ ನಿರ್ಣಯವನ್ನು ಕೈಗೊಳ್ಳಲಾಗಿದೆಯೋ? ಎಂಬುದನ್ನು ಪರಿಶೀಲಿಸುವ ಅಗತ್ಯತೆಗೆ ಸಂಬಂಧಿಸಿದ್ದಾಗಿರಬೇಕೆಂದು ಸ್ಪಷ್ಟಪಡಿಸುವ, ಅದರಲ್ಲಿ ಬಳಸಲಾದ ಪದಗಳನ್ನು ಉಲ್ಲೇಖಿಸದೆ, ಪ್ರಕರಣ 10ರ ಉಪಪ್ರಕರಣ (2)ನ್ನು ಅರ್ಥೈಸುವ ಮೂಲಕ ಇಂತಹ ಸನ್ನಿವೇಶವನ್ನು ಉಂಟುಮಾಡಲಾಗದು.

15. ಈ ಮೇಲಿನದರ ಹಿನ್ನೆಲೆಯಲ್ಲಿ, ಈ ರಿಟ್ ಅರ್ಜಿಯು ಸಮರ್ಥನೀಯವಾದುದಲ್ಲವೆಂದು ನಾನು ತೀರ್ಮಾನಿಸಿದ್ದೇನೆ.

16. ಸಿವಿಲ್ ನ್ಯಾಯಾಲಯವು ಜಾರಿಗೊಳಿಸಿದ, ಉಲ್ಲಂಘಿಸಲಾಗಿದೆಯೆಂದು ಹೇಳಲಾದ, ಯಥಾಸ್ಥಿತಿ ಕಾಯ್ದುಕೊಳ್ಳುವ ಆದೇಶಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ಸೂಕ್ತ ನ್ಯಾಯಾಧಿಕರಣದ ಮುಂದೆ ಸದರಿ ಅಂಶವನ್ನು ಸಹ ಚರ್ಚಿಸಬಹುದು. ರಿಟ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಲ್ಲಿ ಅದನ್ನು ಪರಿಶೀಲಿಸುವುದು ನ್ಯಾಯವಲ್ಲ ಹಾಗೂ ಸೂಕ್ತವಲ್ಲವೆಂದು ನಾನು ನಿರ್ಣಯಿಸಿದ್ದೇನೆ.

17. ಆದ್ದರಿಂದ, ಅರ್ಜಿದಾರರು ಕಾನೂನಿನ ಅನುಸಾರ, ಸೂಕ್ತ ನ್ಯಾಯಾಧಿಕರಣದ ಮುಂದೆ ತಮ್ಮ ಅಳಲನ್ನು ಹೇಳಿಕೊಳ್ಳಲು ಅವರಿಗೆ ಸ್ವಾತಂತ್ರ್ಯವನ್ನು ಮೀಸಲಿರಿಸಿ, ರಿಟ್ ಅರ್ಜಿಗಳನ್ನು ವಜಾ ಮಾಡಲಾಗಿದೆ.

---